**<u>ದಿನಾಂಕಃ 27-03-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಲಾಯಿತು</u>**

**<u>ಮುಂದುವರೆದ ಪಾಟೀ ಸವಾಲು 1ನೇ ಪ್ರತಿವಾದಿ ಪರ ಶ್ರೀ ಸಿ.ಆರ್‌.ಎಸ್‌. ವಕೀಲರಿಂದಃ</u>**

8. ತಡಲಗಿ ಗ್ರಾಮದ ಸರ್ವೆ ನಂ. 55/2 ನು ಎಷ್ಟು ಜನ ಸಾಗುವಳಿ ಮಾಡುತ್ತಾರೆ ಎಂದು ನನಗೆ ಗೊತ್ತಿಲ್ಲ. ತಡಲಗಿ ಗ್ರಾಮದ ಸರ್ವೆ ನಂ. 55/1ಬಿ ಹಾಗೂ ಸರ್ವೆ ನಂ.55/1ಎ ಯಾರು ಸಾಗುವಳಿ ಮಾಡುತ್ತಾರೆ ಎಂದು ನನಗೆ ಗೊತ್ತಿಲ್ಲ. ವಾದಿ ಹಾಗೂ ಪ್ರತಿವಾದಿಯು ಹಾಜರಪಡಿಸಿದ ಹಾತ್ ನಕಾಶೆಯನ್ನು ನೋಡಿದರೆ ಗುರುತಿಸಲು ಆಗುವುದಿಲ್ಲ. ವಾದಿ ಹಾಗೂ ಪ್ರತಿವಾದಿಯ ಸರ್ವೆ ನಂಬರ ನೋಡಿದರೆ ಗುರುತಿಸಲು ಆಗುವುದಿಲ್ಲ. ನನಗೆ ಓದಲು ಬರೆಯಲು ಬರುವುದಿಲ್ಲ.

9. ಪ್ರತಿವಾದಿಯು ಹಾಜರಪಡಿಸಿದ ಹಾತ್ ನಕಾಶೆಯನ್ನು ತೋರಿಸಿದ್ದು ಸರ್ವೆ ನಂ.55/2 ತಿಪ್ಪಣ್ಣ ಆಸ್ತಿ ಎಂದರೆ ಸರಿ. 1ನೇ ಪ್ರತಿವಾದಿಯ ಸರ್ವೆ ನಂ.55/3 ಆಗಿರುತ್ತದೆ ಎಂದರೆ ಸರಿ. ನಾಲಶೆಯಲ್ಲಿ ತೋರಿಸಿದಂತೆ ತಡಲಗಿಯಿಂದ ನಾಗರದಿನ್ನಿಗೆ ಹೋಗುವ ರಸ್ತೆ ಇರುತ್ತದೆ ಎಂದರೆ ಸರಿ. ಸರ್ವೆ ನಂ.55/2 ರ ಪೂರ್ವ ದಿಕ್ಕಿನಲ್ಲಿ ಕೆನಾಲ ರಸ್ತೆ ಇರುತ್ತದೆ ಎಂದರೆ ಸಾಕ್ಷಿಯು ನಕಾಶೆಯಲ್ಲಿ ತೋರಿಸಿರುತ್ತಾರೆ ಅಲ್ಲಿ ರಸ್ತೆ ಇರುವುದಿಲ್ಲ ಎಂದು ನುಡಿಯುತ್ತಾರೆ. ಪೂರ್ವ ದಿಕ್ಕಿಗೆ ಕೆನಾಲ ಇರುತ್ತದೆ ಎಂದರ ಸರಿ. ಕೆನಾಲದ ಎರಡು ಬದಿಗೆ ರಸ್ತೆ ಇರುತ್ತದೆ ಎಂದರೆ ಸರಿ. ಸದರಿ ರಸ್ತೆಯ ಮೂಲಕ ಸಾರ್ವಜನಿಕರು ಹಾಗೂ ನಾವು ಹಾದುಹೋಗುತ್ತೇವೆ ಎಂದರೆ ಸರಿ. ಸದರಿ ರಸ್ತೆಯಲ್ಲಿ ತಿಪ್ಪಣ್ಣ ಹಾದುಹೋಗುತ್ತಾನೆ ಎಂದರೆ ಸಾಕ್ಷಿಯು ತೆಲಗಿ ಶೆಟ್ಟರ ಜಮೀನು ಇರುತ್ತದೆ ಎಂದು ನುಡಿಯುತ್ತಾರೆ. ತೆಲಗಿ ಶೆಟ್ಟರ ರವರ ಜಮೀನು ಇರುತ್ತದೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

10. ಎಷ್ಟು ರೂಪಾಯಿಗಳ ಬಾಂಡ ಮಾಡಲಾಗಿದೆ ಎಂದು ನನಗೆ ಗೊತ್ತಿಲ್ಲ. ಎಷ್ಟು ರೂಪಾಯಿಯ ಬಾಂಡಿನ ಮೇಲೆ ಬರೆಯಲಾಗಿದೆ ಎಂದು ನನಗೆ ನೆನಪಿಲ್ಲ. ಸದರಿ ಬಾಂಡಿನಲ್ಲಿ ದಾರಿ ಬಗ್ಗೆ ಬರೆಯಲಾಗಿರುತ್ತದೆ. ಬಾಂಡ ಪೇಪರ ಬರೆಯುವಾಗ ನಾನು ಹಾಜರಿದ್ದೇನು.

ಬಾಂಡನು ಬರೆಯಲು ಯಾರು ಮಾಹಿತಿ ನೀಡಿರುತ್ತಾರೆ ಎಂದು ನನಗೆ ನೆನಪಿಲ್ಲ. ಸದರಿ ಬಾಂಡನು ಶರಣಯ್ಯ ಸ್ವಾಮಿ ಬರೆದಿರತ್ತಾರೆ.

**ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು ಸಮಯಾವಕಾಶ ನೀಡಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸರಿ ಅದೆ.**

**(ಶ್ರೀ ಅಮಿತ್ ಘಟ್ಟಿ)**

**ದಿವಾಣಿ ನ್ಯಾಯಾಧೀಶರು ಮತ್ತು**

**ನ್ಯಾಯಿಕ ದಂಡಾಧಿಕಾರಿಗಳು**

**ಬಸವನ ಬಾಗೇವಾಡಿ.**